**<u>ದಿನಾಂಕಃ 30.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ವಾದಿ ಪರ ಶ್ರೀ.ಜೆ.ಪಿ. ವಕೀಲರಿಂದಃ</u>**

1) 1ನೇ ಪ್ರತಿವಾದಿ ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ಶ್ರವಣಯ್ಯನತೋಪಿನಲ್ಲಿ ನಿವೇಶನಗಳು ಹಂಚಿಕೆ ಆಗಿರುತ್ತವೆ. ಅಲ್ಲಿ ನನಗೆ ಒಂದು ನಿವೇಶನ ಇದೆ. ನನ್ನ ನಿವೇಶನದಲ್ಲಿ ನಾನು ಶೆಡ್ ನಿರ್ಮಾಣ ಮಾಡಿರುತ್ತೇನೆ. 1ನೇ ಪ್ರತಿವಾದಿ ಸದರಿ ನಾನು ನಿರ್ಮಾಣ ಮಾಡಿದ ಶೆಡ್ಡಿನಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ನಾನು ಮೊದಲಿಗೆ ಸದರಿ ಶೆಡ್ಡನ್ನು 1ನೇ ಪ್ರತಿವಾದಿಗೆ ಬಾಡಿಗೆ ಆಧಾರದ ಮೇಲೆ ನೀಡಿದ್ದು, ನಂತರ ನಾನು ಆತನಿಂದ ಸ್ವತ್ತನ್ನು ವಾಪಸ್ಸು ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಶ್ರವಣಯ್ಯನತೋಪಿನಲ್ಲಿ 1ನೇ ಪ್ರತಿವಾದಿಗೆ ಸರ್ಕಾರದ ವತಿಯಿಂದ ಯಾವುದೇ ನಿವೇಶನ ಮಂಜೂರು ಆಗಿರುವುದಿಲ್ಲ. ಸದರಿ ತೋಪಿನಲ್ಲಿ 2ನೇ ಪ್ರತಿವಾದಿಗೆ ಒಂದು ನಿವೇಶನ ಮಂಜೂರು ಆಗಿತ್ತು ಎಂದರೆ ಸರಿ. 2ನೇ ಪ್ರತಿವಾದಿಗೆ ಮಂಜೂರು ಆಗಿದ್ದ ನಿವೇಶನದ ಮೇಲೆ ಈ ಪ್ರಕರಣವನ್ನು ಹೂಡಲಾಗಿದೆ ಎಂದರೆ ಸರಿ.

2) 2ನೇ ಪ್ರತಿವಾದಿ ತನಗೆ ಮಂಜೂರಾಗಿದ್ದ ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಈ ಹಿಂದೆ 1ನೇ ಪ್ರತಿವಾದಿ ನನ್ನ ನಿವೇಶನದಲ್ಲಿ ಬಾಡಿಗೆಗೆ ಇದ್ದು, ನಂತರ ಆತ ಬಾಡಿಗೆ ರದ್ದತಿ ಮಾಡಿಕೊಂಡು ಹೊರ ಹೋದ ನಂತರ ಆತ ವಾದಿಯಿಂದ ದಾವಾ ಸ್ವತ್ತನ್ನು ಬಾಡಿಗೆಗೆ ಪಡೆದುಕೊಂಡು ವಾಸವಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ದಾಯಾದಿಗಳು ಆಗಿರುತ್ತಾರೆ. 2ನೇ ಪ್ರತಿವಾದಿಯು ದಾವಾ ಸ್ವತ್ತನ್ನು ವಾದಿಗೆ

ಮಾರಾಟ ಮಾಡಿರುವ ಕಾರಣ ಆ ಸ್ವತ್ತಿನ ಮೇಲೆ 1ನೇ ಪ್ರತಿವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

3) ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ತಯಾರಿಸಲು ನಾನೇ ಮಾಹಿತಿ ನೀಡಿದ್ದೆನು. 1ನೇ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಶೌಚಾಲಯ ನಿರ್ಮಿಸಿಕೊಂಡು ಆತ ತನ್ನ ನಿವೇಶನಕ್ಕೆ ಕಂದಾಯ, ನೀರಿನ ಕಂದಾಯ ಮತ್ತು ವಿದ್ಯುಚ್ಛಕ್ತಿಯ ಬಿಲ್ಲನ್ನು ಪಡೆದುಕೊಂಡಿರುತ್ತಾನೆ ಎಂಬ ಕುರಿತು ನಾನು ದಾಖಲೆಗಳನ್ನು ನೋಡಿರುತ್ತೇನೆ. ವಾದಿ ಈ ಪ್ರಕರಣದಲ್ಲಿ ಸಲ್ಲಿಸಿರುವ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ದಾವಾ ಸ್ವತ್ತನ್ನು ಖರೀದಿ ಮಾಡಿದ ನಂತರ ಆತ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುವುದನ್ನು ನೋಡಿ ಆತನ ಹೆಸರಿಗೆ ಪಂಚಾಯಿತಿ ದಾಖಲೆಗಳನ್ನು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ವಾದಿಗೆ ಸೇರಿರುತ್ತದೆ ಎಂದು ನನಗೆ ತಿಳಿದಿದ್ದರೂ ಸಹ 1ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**